# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1279 (1356) |
| ಸದಸ್ಯರ ಹೆಸರು | : | ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18-12-2025 |
| ಉತ್ತರಿಸುವ ಸಚಿವರು | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸ ಬಗೆಯ ಪ್ರವಾಸಿ ಆಕರ್ಷಣೆಗಳಿಗೆ ಪೂರಕವಾದ ಭೌಗೋಳಿಕ, ಸಂಸ್ಕೃತಿಕ ಹಾಗೂ ಪಾರಂಪರಿಕ ಹಿನ್ನೆಲೆಯನ್ನು ಹೊಂದಿರುವ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಹೇರಳ ಅವಕಾಶಗಳಿರುವ ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ರೂಪಿಸಿರುವ ಯೋಜನೆಗಳೇನು; | 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 385ರಲ್ಲಿ "ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲ ತೀರದ ಅಭಿವೃದ್ಧಿ ಹಾಗೂ ರಸ್ತೆಬದಿ ಸೌಲಭ್ಯಗಳನ್ನು (ಹೈವೇ ಹಬ್ಸ್) ಉನ್ನತೀಕರಿಸುವ ಮೂಲಕ ಶೈಕ್ಷಣಿಕ, ಆರೋಗ್ಯ, ಸಾಹಸ ಜಲಸಾರಿಗೆ ಹಾಗೂ ಕಡಲ ತೀರದ ಪ್ರವಾಸೋದ್ಯಮಗಳಿಗೆ ಲಭ್ಯವಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಲಾಗುವುದು" ಎಂದು ಘೋಷಿಸಲಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವೃತ್ತಿಪರ ಸಲಹಾ ಸಂಸ್ಥೆಯನ್ನು ಆಯ್ಕೆ ಮಾಡಲು ಕರೆದ ಟೆಂಡರ್‌ನಲ್ಲಿ ಬಿಡ್ಡುದಾರರಾದ M/s IPE Global Limited ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಹಾಗೂ ಪಿಪಿಪಿ ಮಾದರಿಯಲ್ಲಿ ಉಡುಪಿಯಲ್ಲಿ 3 ಯೋಜನೆಗಳನ್ನು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಯೋಜನೆಗಳನ್ನು ಕೈಗೊಳ್ಳಲು Concept Note ಗೆ IDD ಯಿಂದ ಅನುಮೋದನೆ ಪಡೆಯಲಾಗಿರುತ್ತದೆ. ವಹಿವಾಟು ಸಲಹೆಗಾರರನ್ನು ಅಯ್ಕೆಮಾಡಿಕೊಳ್ಳಲು ಎರಡು ಬಾರಿ ಟೆಂಡರ್ ಕರೆಯಲಾಗಿದ್ದು. ಬಿಡ್ಡುದಾರರು ತಾಂತ್ರಿಕವಾಗಿ ಅನರ್ಹರಾಗಿರುವುದರಿಂದ ಮರು ಟೆಂಡರ್ ಕರೆಯಲು ಕ್ರಮವಹಿಸಲಾಗುತ್ತಿದೆ.<br>ಉತ್ತರ ಕನ್ನಡ ಜಿಲ್ಲೆಯಲ್ಲಿರುವ ನಾಲ್ಕು ನಿವೇಶನಗಳಲ್ಲಿ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು Concept Note ಗಳನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ. IDD ಇಂದ concept note ಅನುಮೋದನೆ ನಂತರ ವಹಿವಾಟು ಸಲಹೆಗಾರರನ್ನು ಟೆಂಡರ್ ಮೂಲಕ ಆಯ್ಕೆ ಮಾಡಲು ಕ್ರಮ ವಹಿಸಲಾಗುವುದು.<br>ಮುಂದುವರೆದು, ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ನಿವೇಶನದ ವಿವರವನ್ನು (ಲ್ಯಾಂಡ್ ಬ್ಯಾಂಕ್) **ಅನುಬಂಧ-1** ರಲ್ಲಿ ಒದಗಿಸಿದೆ. ಸದರಿ ಸ್ಥಳಗಳಲ್ಲಿ ಪಿಪಿಪಿ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |

| | | |
|---|---|---|
| | | ಕರಾವಳಿ ಜಿಲ್ಲೆಗಳನ್ನೊಳಗೊಂಡಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ಅನ್ನು ಜಾರಿಗೆ ತರಲಾಗಿರುತ್ತದೆ. ಈ ನೀತಿಯಡಿ ಗುರುತಿಸಲಾಗಿರುವ 25 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಪ್ರವಾಸೋದ್ಯಮ/ಆತಿಥ್ಯ ಕ್ಷೇತ್ರದಲ್ಲಿ ಸಣ್ಣ ಉದ್ದಿಮೆದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಕಾರ್ಯಕ್ರಮ ಮತ್ತು ಮೊಬೈಲ್ ಕ್ಯಾಂಟಿನ್ ಖರೀದಿಸಲು ಸಹಾಯಕ ಧನ ಕಾರ್ಯಕ್ರಮ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. |
| ಆ) | ಕಳೆದ 2 ವರ್ಷಗಳಲ್ಲಿ ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನದ ವಿವರಗಳೇನು; ಹಾಗೂ ಸದರಿ ಅನುದಾನದಲ್ಲಿ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳೇನು; | ಕರಾವಳಿ ಜಿಲ್ಲೆಗಳ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಯಿಂದ ವಿವಿಧ ಲೆಕ್ಕಶೀರ್ಷಿಕೆಗಳಡಿ ಕಳೆದ 02 ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಇ) | ಪ್ರವಾಸೋದ್ಯಮ ಚಟುವಟಿಕೆಗಳನ್ನು ಯೋಜಿತ ರೀತಿಯಲ್ಲಿ ನಡೆಸಲು ಹಾಗೂ ಉತ್ತೇಜನ ನೀಡಲು "ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ" ಯನ್ನು ಸ್ಥಾಪಿಸಲು ಸರ್ಕಾರ ಕೂಡಲೇ ಕ್ರಮ ವಹಿಸುವುದೇ; | ಕರಾವಳಿ ಜಿಲ್ಲೆಗಳ ಅಭಿವೃದ್ಧಿಗಾಗಿ ಈಗಾಗಲೇ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. |
| ಈ) | ಕರಾವಳಿಯಲ್ಲಿ ಯೋಜಿತ, ಸುಸ್ಥಿರ ಹಾಗೂ ಪರಿಸರ ಸ್ನೇಹಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ರೂಪಿಸಿ ಆ ಮೂಲಕ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಸಮುದಾಯದ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಸಮನ್ವಯ ಸಾಧಿಸಲು ಸರ್ಕಾರ ವಹಿಸಲಿರುವ ಕ್ರಮಗಳೇನು? | ಈ ಮೇಲೆ ತಿಳಿಸಿದಂತೆ, ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ನಿವೇಶನಗಳನ್ನು ಗುರುತಿಸಿ, ಸದರಿ ಸ್ಥಳಗಳಲ್ಲಿ ಪಿಪಿಪಿ ಮಾದರಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |

**ಸಂಖ್ಯೆ: ಟಿಓಆರ್ 304 ಟಿಡಿವಿ 2025**

**(ಹೆಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

ಅನುಬಂಧ-1

## Details of DoT Land Banks in Coastal Karnataka

| Sl No. | District | Name of the Land parcel | Survey Number(s) | Extent of Land (in decimal acres) | Existing / Completed / Ongoing Projects | Proposed Projects | Remarks on CRZ |
|---|---|---|---|---|---|---|---|
| 1 | Dakshina Kannada | Thannirbhavi Beach | 52 (4.10 acres) 1 (1.10 acres) | 5.50 | - | Coastal Tourism Development - Resort | Not classified under Beach Tourism Area in CZMP |
| 2 | Udupi | Trasi Beach | 9/2B | 6.13 | - | Coastal Tourism Development - Multi-Product Tourism Zone on PPP mode | Not classified under Beach Tourism Area in CZMP. However the land parcel is present on the landward side, CRZ clearance may be obtained. |
| 3 | Udupi | Trasi Beach | 27/3C1, | 3.20 | | Coastal Tourism Development - Multi-Product Tourism Zone on PPP mode | Partial area of the land parcel is classified under Beach Tourism Area in CZMP. However the land parcel is present on the landward side. CRZ clearance may be obtained. |
| 4 | Udupi | Trasi Beach | 27/3B, 27/1A1P2 | 5.58 | Development of Tourist Amenities by DoT | - | Classified under Beach Tourism Area in CZMP. Dept is undertaking development of Tourist Amenities. |
| 5 | Uttara Kannada | Chittakula, Sadasivgad, Karwar | 6 | 10.00 | - | - | CRZ is not applicable |
| 6 | Uttara Kannada | Banavasi | 197 | 7.75 | - | - | CRZ is not applicable |
| 7 | Uttara Kannada | Gokarna | 1567 | 1.95 | - | - | CRZ is not applicable |
| 8 | Uttara Kannada | Anmod | 53A2, 53A1A/7, 53A1A/8 | 1.05 | - | - | CRZ is not applicable |

ಶ್ರೀ ಪ್ರತಾಪ್ ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ) ರವರ ಪ್ರಶ್ನೆ ಸಂಖ್ಯೆ:1279ಕ್ಕೆ ಅನುಬಂಧ-2

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | ಷರಾ |
|---|---|---|---|---|---|---|---|
| | | | | | 2023-24 | 2024-25 | |
| | **ದಕ್ಷಿಣ ಕನ್ನಡ ಜಿಲ್ಲೆ** | | | | | | |
| | **ಸುಳ್ಯ ತಾಲ್ಲೂಕು** | | | | | | |
| | **ಮಂಗಳೂರು ತಾಲ್ಲೂಕು** | | | | | | |
| 1 | ಮಂಗಳೂರು ತಾಲ್ಲೂಕಿನ ಉಳ್ಳಾಲ ಗ್ರಾಮದ ಚೀರುಂಭ ಭಗವತಿ ದೇವಸ್ಥಾನದ ಬಳಿ ಯಾತ್ರಿನಿವಾಸ ಕಾಮಗಾರಿ (ಮಂಗಳೂರು ತಾಲ್ಲೂಕಿನ ಸೋಮೇಶ್ವರ ಗ್ರಾಮದ ಸೋಮೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ **ಬದಲಾಗಿ**) | 50.00 | ಕೆಆರ್ ಐಡಿಎಲ್ | 35.00 | 15.00 | 0.00 | ಮುಕ್ತಾಯದ ಹಂತದಲ್ಲಿದೆ |
| 2 | ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಮಂಗಳೂರಿನ ಉರ್ವ ಶ್ರೀ ಮಾರಿಯಮ್ಮ ದೇವಸ್ಥಾನಕ್ಕೆ ಮೂಲಭೂತ ಸೌಕರ್ಯ ಶೌಚಾಲಯ ಕಾಮಗಾರಿ | 50.00 | ನಿರ್ಮಿತಿ ಕೇಂದ್ರ | 17.00 | 33.00 | 0.00 | ಪೂರ್ಣಗೊಂಡಿದೆ |
| 3 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಉಳ್ಳಾಲದ ಸಯ್ಯದ ಮದನಿ ದರ್ಗಾದ ಹತ್ತಿರ ಯಾತ್ರಿನಿವಾಸ ನಿರ್ಮಾಣ | 75.00 | ಕೆಆರ್ ಐಡಿಎಲ್ | 70.00 | 5.00 | 0.00 | ಪೂರ್ಣಗೊಳ್ಳುವ ಹಂತದಲ್ಲಿದೆ |
| 4 | ಮಂಗಳೂರು ತಾಲ್ಲೂಕಿನ ಮಂಜನಾಡಿ ದರ್ಗಾದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ | 50.00 | ಕೆಆರ್ ಐಡಿಎಲ್ | 20.00 | 30.00 | 0.00 | ಆರ್.ಸಿ.ಸಿ ಕಾಮಗಾರಿ ಪ್ರಗತಿಯಲ್ಲಿದೆ |
| 5 | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ತಣ್ಣೀರುಬಾವಿ ಕಡಲ ತೀರಕ್ಕೆ ಸಂಪರ್ಕ ರಸ್ತೆ, ದುರಸ್ತಿ, ಅಗಲೀಕರಣ ಹಾಗೂ ಇತರೆ ಕಾಮಗಾರಿಯ ಕುರಿತು | 100.00 | ಕೆಆರ್ ಐಡಿಎಲ್ | 73.00 | 0.00 | 27.00 | ಪೂರ್ಣಗೊಂಡಿದೆ |
| | **ಬೆಳ್ತಂಗಡಿ ತಾಲ್ಲೂಕು** | | | | | | |
| 6 | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಫಾಲ್ಸ್ ನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಗುರುತಿಸಿ, ಅಭಿವೃದ್ಧಿಪಡಿಸುವುದು. | 150.00 | ಕೆಆರ್ ಐಡಿಎಲ್ | 50.00 | 0.00 | 40.00 | ಪೂರ್ಣಗೊಂಡಿದೆ |
| 7 | ಬೆಳ್ತಂಗಡಿ ತಾಲ್ಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳದ ಸ್ನಾನಘಟ್ಟ ಅಭಿವೃದ್ಧಿ ಕಾಮಗಾರಿ | 464.52 | ಲೋಕೋಪಯೋಗಿ ಇಲಾಖೆ | 362.00 | 100.00 | 0.00 | ಪೂರ್ಣಗೊಂಡಿದೆ |
| | **ಮೂಡಬಿದರೆ ತಾಲ್ಲೂಕು** | | | | | | |
| 8 | ಜೈನ ಕಾಶಿ ಮೂಡಬಿದರೆಯಲ್ಲಿರುವ ಯಾತ್ರಿನಿವಾಸಕ್ಕೆ 15 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 70.00 | ಕೆಆರ್ ಐಡಿಎಲ್ | 52.50 | 17.50 | 0.00 | ಪೂರ್ಣಗೊಂಡಿದೆ |
| | ಒಟ್ಟು | **1009.52** | | **679.50** | **200.50** | **67.00** | |

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | ಷರಾ |
|---|---|---|---|---|---|---|---|
| | | | | | 2023-24 | 2024-25 | |
| | **ಉಡುಪಿ ತಾಲ್ಲೂಕು** | | | | | | |
| | **ಪುತ್ತೂರು ತಾಲ್ಲೂಕು** | | | | | | |
| 9 | ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪ್ರವಾಸೋದ್ಯಮ ಕೇಂದ್ರವಾದ ಬಿರುಮಲೆ ಬೆಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿಯ ಕುರಿತು | 200.00 | ಜಿಲ್ಲಾಧಿಕಾರಿಗಳು | 0.00 | 0.00 | 100.00 | ಪ್ರಾರಂಭಿಸಲಾಗಿದೆ. |
| | **ಬೈಂದೂರು ತಾಲ್ಲೂಕು** | | | | | | |
| 10 | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ಅಭಿವೃದ್ಧಿ ಕಾಮಗಾರಿ ಗಳನ್ನು ಕೈಗೊಳ್ಳುವ ಬಗ್ಗೆ | 971.31 | ಕೆ.ಟಿ. ಐ.ಎಲ್. | 393.00 | 133.99 | 0.00 | ಪ್ರಗತಿಯಲ್ಲಿದೆ |
| 11 | ಉಡುಪಿ ಜಿಲ್ಲೆ, ಬೈಂದೂರು ತಾಲ್ಲೂಕಿನ ಪಡುವರಿ ಸೋಮೇಶ್ವರದ ಶ್ರೀ ಸೋಮನಾಥೇಶ್ವರ ದೇವಸ್ಥಾನದ ಬಳಿ ಅಭಿವೃದ್ಧಿ ಕಾಮಗಾರಿ | 124.00 | ಕೆ.ಟಿ. ಐ.ಎಲ್. | 0.00 | 41.00 | 0.00 | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ದಿ: 15.04.2024 ರನ್ವಯ ಸರ್ಕಾರದ ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸಬೇಕಿದೆ |
| | **ಕಾಪು ತಾಲ್ಲೂಕು** | | | | | | |
| 12 | ಉಡುಪಿ ಜಿಲ್ಲೆಯ ಕಾಪು ವಿಧಾನಸಭಾಕ್ಷೇತ್ರದ ಪಡುಬಿದ್ರಿ ನಡಿಘಟ್ಟ ಬೀಚ್ ರಸ್ತೆಯ ಎಂಡು ಪಾಯಿಂಟ್ ನಲ್ಲಿ ಸಂಪರ್ಕ ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣ ಕಾಮಗಾರಿ | 75.00 | ಲೋಕೋಪಯೋಗಿ ಇಲಾಖೆ | 25.00 | 25.00 | 0.00 | ಪೂರ್ಣಗೊಂಡಿದೆ |
| | **ಒಟ್ಟು** | **1370.31** | | **418.00** | **199.99** | **100.00** | |
| | | | | | | | |
| | **ಉತ್ತರ ಕನ್ನಡ ಜಿಲ್ಲೆ** | | | | | | |
| | **ಭಟ್ಕಳ ತಾಲ್ಲೂಕು** | | | | | | |
| 13 | ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಮಾರಿಕೇರಿ ಗ್ರಾಮ ಪಂಚಾಯತ್‌ನ ಕಿತ್ರ ದೇವಿಮನೆ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ [ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಶಿರಾಲಿ ಮಾಸ್ತಿಕಟ್ಟೆಯಲ್ಲಿರುವ ಶ್ರೀ ಹಾದಿಮಾಸ್ತಿ ಯಾನೆ ಜಟ್ಟಿಮಾಸ್ತಿ ದೇವಸ್ಥಾನದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ ಬದಲಾಗಿ] (2018-19) | 50.00 | ಕೆಆರ್‌ಐಡಿಎಲ್ | 50.00 | 5.00 | 0.00 | ಪೂರ್ಣಗೊಂಡಿದೆ |
| 14 | ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಮಾರಿಕೇರಿ ಗ್ರಾಮ ಪಂಚಾಯತ್‌ನ ಕಿತ್ರ ದೇವಿಮನೆ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ [ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಶಿರಾಲಿ ಮಾಸ್ತಿಕಟ್ಟೆಯಲ್ಲಿರುವ ಶ್ರೀ ಹಾದಿಮಾಸ್ತಿ ಯಾನೆ ಜಟ್ಟಿಮಾಸ್ತಿ ದೇವಸ್ಥಾನದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ ಬದಲಾಗಿ] (2018-19) | 50.00 | ಕೆಆರ್‌ಐಡಿಎಲ್ | 50.00 | 5.00 | 0.00 | ಪೂರ್ಣಗೊಂಡಿದೆ |

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | ಷರಾ |
|---|---|---|---|---|---|---|---|
| | | | | | 2023-24 | 2024-25 | |
| | **ದಾಂಡೇಲಿ ತಾಲ್ಲೂಕು** | | | | | | |
| 15 | ದಾಂಡೇಲಿಯಲ್ಲಿ ಪ್ರವಾಸಿ ನಿರ್ವಚನ (ಇಂಟರ್‌ಪ್ರಿಟೇಷನ್ ಸೆಂಟರ್) ಕೇಂದ್ರ ಸ್ಥಾಪನೆ | 200.00 | ಕೆಆರ್‌ಐಡಿಎಲ್ | 200.00 | 30.00 | 0.00 | ಮುಕ್ತಾಯಹಂತದಲ್ಲಿದೆ |
| 16 | ದಾಂಡೇಲಿಯಲ್ಲಿ ಪ್ರವಾಸಿ ನಿರ್ವಚನ (ಇಂಟರ್‌ಪ್ರಿಟೇಷನ್ ಸೆಂಟರ್) ಕೇಂದ್ರ ಸ್ಥಾಪನೆ | 200.00 | ಕೆಆರ್‌ಐಡಿಎಲ್ | 200.00 | 30.00 | 0.00 | ಮುಕ್ತಾಯಹಂತದಲ್ಲಿದೆ |
| | **ಹಳಿಯಾಳ ತಾಲ್ಲೂಕು** | | | | | | |
| 17 | ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಪಟ್ಟಣದಲ್ಲಿರುವ ಮೋತಿಕೆರೆ ಪ್ರದೇಶದಲ್ಲಿ ಪ್ರವಾಸಿ ಮೂಲಸೌಲಭ್ಯಗಳ ಅಭಿವೃದ್ಧಿ | 90.00 | ಜಿಲ್ಲಾಧಿಕಾರಿಗಳು (ಕೆಆರ್‌ಐಡಿಎಲ್) | 90.00 | 22.50 | 0.00 | ಪೂರ್ಣಗೊಂಡಿದೆ |
| | **ಜೋಯಿಡಾ ತಾಲ್ಲೂಕು** | | | | | | |
| 18 | ಉತ್ತರಕನ್ನಡ ಜಿಲ್ಲೆಯ ದೇವಬಾಗ್ ಬೀಚ್‌ನಲ್ಲಿ ಪ್ರವಾಹ ರಕ್ಷಣಾ ಕಾಮಗಾರಿ. [ಜಟ್ಟಿ ನಿರ್ಮಾಣದ ಬದಲು ಈ ಕಾಮಗಾರಿ ಕೈಗೊಳ್ಳಲಾಗಿದೆ] | 200.00 | ಲೋಕೋಪಯೋಗಿ ಇಲಾಖೆ | 200.00 | 100.00 | 0.00 | ಪೂರ್ಣಗೊಂಡಿದೆ |
| | **ಸಿದ್ದಾಪೂರ ತಾಲ್ಲೂಕು** | | | | | | |
| 19 | ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪೂರ ತಾಲ್ಲೂಕಿನ ಬೇಡ್ಕಣಿ ಗ್ರಾಮದಲ್ಲಿರುವ ಶ್ರೀ ಹನುಮಂತ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ [ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಮತ್ತು ಶಿರಸಿ ತಾಲ್ಲೂಕಿಗೆ ಅನ್ವಯವಾಗುವಂತ ಶಾಲಮಾಲಾ ನದಿಗೆ ಅಡ್ಡಲಾಗಿ ಹಿತ್ತಲ ಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಇಲೆಹಳ್ಳಿ ಶ್ರೀ ಕ್ಷೇತ್ರ ಗಣೇಶ ಪಾಲದ ಹತ್ತಿರ ತೂಗು ಸೇತುವೆ ನಿರ್ಮಾಣ ಬದಲಾಗಿ ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲಾಗಿದೆ] | 82.00 | ನಿರ್ಮಿತಿ ಕೇಂದ್ರ | 82.00 | 22.00 | 0.00 | ಪೂರ್ಣಗೊಂಡಿದೆ |
| | **ಮುಂಡಗೋಡ ತಾಲ್ಲೂಕು** | | | | | | |
| 20 | ಉತ್ತರ ಕನ್ನಡ ಜಿಲ್ಲೆ, ಮುಂಡಗೋಡ ತಾಲ್ಲೂಕಿನ ಅತ್ತಿವೇರಿ ಪಕ್ಷಿಧಾಮಕ್ಕೆ ಹೋಗುವ ರಸ್ತೆ ಸುಧಾರಣೆ | 99.98 | ಲೋಕೋಪಯೋಗಿ ಇಲಾಖೆ | 99.98 | 25.00 | 0.00 | ಪೂರ್ಣಗೊಂಡಿದೆ |
| | **ಶಿರಸಿ ತಾಲ್ಲೂಕು** | | | | | | |
| 21 | ಶಿರಸಿ ನಗರದ ದೇವಿಕೆರೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ. | 250.00 | ಕೆಆರ್‌ಐಡಿಎಲ್ | 225.00 | 25.00 | 25.00 | ಪೂರ್ಣಗೊಂಡಿದೆ |

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಮಾರ್ಚ್ 2023ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಅನುದಾನ | ಬಿಡುಗಡೆ ಮಾಡಿರುವ ಅನುದಾನ | | ಷರಾ |
|---|---|---|---|---|---|---|---|
| | | | | | 2023-24 | 2024-25 | |
| 22 | ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಅಂಡಗಿ ಗ್ರಾಮದಲ್ಲಿರುವ ಗುರುಮಠದ ಹತ್ತಿರ ಯಾತ್ರಿನಿವಾಸ ನಿರ್ಮಾಣ [ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಮತ್ತು ಶಿರಸಿ ತಾಲ್ಲೂಕಿಗೆ ಅನ್ವಯವಾಗುವಂತೆ ಶಾಲ್ಮಲಾ ನದಿಗೆ ಅಡ್ಡಲಾಗಿ ಹಿತ್ತಲ ಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಇಲೆಹಳ್ಳಿ ಶ್ರೀ ಕ್ಷೇತ್ರ ಗಣೇಶ ಪಾಲದ ಹತ್ತಿರ ತೂಗು ಸೇತುವೆ ನಿರ್ಮಾಣ ಬದಲಾಗಿ ] | 82.00 | ನಿರ್ಮಿತಿ ಕೇಂದ್ರ | 82.00 | 22.00 | 0.00 | ಪೂರ್ಣಗೊಂಡಿದೆ |
| 23 | ಉತ್ತರ ಕನ್ನಡ ಜಿಲ್ಲೆ ಶಿರಸಿ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾ ಸಂಸ್ಥಾನ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ | 100.00 | ನಿರ್ಮಿತಿ ಕೇಂದ್ರ | 100.00 | 25.00 | 0.00 | ಪೂರ್ಣಗೊಂಡಿದೆ |
| 24 | ಶಿರಸಿ ತಾಲ್ಲೂಕಿನ ಸೋಂದಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಶ್ರೀ ಕ್ಷೇತ್ರ ಸ್ವಾತಿ ದಿಗಂಬರ ಜೈನ ಮಠ ಇಲ್ಲಿ ಯಾತ್ರಿನಿವಾಸ ನಿರ್ಮಾಣ | 164.25 | ನಿರ್ಮಿತಿ ಕೇಂದ್ರ | 144.25 | 0.00 | 20.00 | ಪ್ರಗತಿಯಲ್ಲಿದೆ |
| | **ಯಲ್ಲಾಪುರ ತಾಲ್ಲೂಕು** | | | | | | |
| 25 | ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ದೇಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಿಗೆ ಗ್ರಾಮದ ಶಿವಪುರ ತೂಗುಸೇತುವೆ ಹಾಗೂ ಕಾಳಿ ನದಿ ಹಿನ್ನೀರಿನ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಿ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ | 100.00 | ಕೆ.ಆರ್.ಐ.ಡಿ.ಎಲ್ | 0.00 | 0.00 | 100.00 | ಮಳೆ ಪ್ರಮಾಣ ಜಾಸ್ತಿಯಾಗಿರುವುದರಿಂದ ಕಾಳಿ ನದಿ ಹಿನ್ನೀರಿನ ಪ್ರದೇಶದಲ್ಲಿ ತಂಗಿರುವದ ನೀರಿನ ಪ್ರಮಾಣ ಕಡಿಮೆಯಾದ ನಂತರ ಜನೇವರಿ ಮಾಹೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ಅನುಷ್ಠಾನ ಸಂಸ್ಥೆರವರು ತಿಳಿಸಿರುತ್ತಾರೆ. |
| | **ಉತ್ತರ ಕನ್ನಡ ಜಿಲ್ಲೆಯ ಒಟ್ಟು** | **1668.23** | | **1523.23** | **311.50** | **145.00** | |
| | **ಗ್ರ್ಯಾಂಡ್ ಟೋಟಲ್** | **4048.06** | | **2620.73** | **711.99** | **312.00** | |